## ನಕ್ಕು ನಗಿಸುವ '.. ಪಾಂಡು'

ಕಲರ್ಸ್ ಸೂಪರ್‌ನಲ್ಲಿ ಪ್ರಸಾರವಾಗುತ್ತಿರುವ 'ಪಾಪ ಪಾಂಡು' ಮನೆ ಮಂದಿಯೆಲ್ಲಾ ಕುಳಿತು ವೀಕ್ಷಿಸಿ ನಕ್ಕು ಹಗುರವಾಗುವಂತಹ ಧಾರಾವಾಹಿ. ಅದರಲ್ಲೂ ಕನ್ನಡಕ್ಕಾಗಿ ಕೈಎತ್ತಿದ ಪಾಂಡು 'ಬಿಡೆನು ನಿನ್ನ ಕೈನಾ' ಕಂತುಗಳಂತೂ ತುಂಬಾ ರಂಜಿಸಿದವು. ಯುವಜನರ ಮೊಬೈಲ್ ಹುಚ್ಚನ್ನು ಹಾಸ್ಯದ ಲೇಪದೊಂದಿಗೆ ವಿಡಂಬನಾತ್ಮಕವಾಗಿ ಬಿಂಬಿಸಿರುವ ರೀತಿ ತುಂಬಾ ಚೆನ್ನಾಗಿತ್ತು. ಪಾತ್ರಧಾರಿಗಳೆಲ್ಲಾ ತುಂಬಾ ಲವಲವಿಕೆಯಿಂದ ನಟಿಸುತ್ತಾರೆ. ಕಚಗುಳಿಯಿಡುವ ಸಂಭಾಷಣೆ, ನುರಿತ ನಿರ್ದೇಶನದಿಂದ ಕೂಡಿದ 'ಪಾಪ ಪಾಂಡು' ದೆವ್ವ ಭೂತ, ಹೆಂಗಸರ ಮಸಲತ್ತಿನ ಧಾರಾವಾಹಿಗಳ ನಡುವೆ ವೀಕ್ಷಕರನ್ನು ನಕ್ಕುನಗಿಸುವಲ್ಲಿ ಸೀಸನ್ ಎರಡರಲ್ಲೂ ಸಫಲವಾಗಿದೆ. ಸಿಹಿಕಹಿ ಚಂದ್ರು ಅವರ ತಂಡಕ್ಕೆ ಅಭಿನಂದನೆಗಳು.

—ಗೀತಾ ನೆಲ್ಲಿಕಾಯಿ, ಬೆಂಗಳೂರು

## ಕಥೆ ಊಹಿಸಬಹುದು!

'ಮಗಳು ಜಾನಕಿ'ಯ ಡಿಸೆಂಬರ್ 20ರ ಕಂತಿನ ಕಥೆಗೆ ಕಳೆ ಕಟ್ಟಲು ಚಂದು ಭಾರ್ಗಿಯ ಹಾಜರಿ ಅತ್ಯಗತ್ಯ ಎನಿಸುವಂತಿತ್ತು. ಏನವರ ಗತ್ತು, ಕ್ಷಣ ಕ್ಷಣ ಬದಲಾಗುವ ಹಾವ ಭಾವ! ನಿಜಕ್ಕೂ ಅದ್ಭುತ ಅಭಿನಯ. ಅಂದ ಹಾಗೆ ಈ ಧಾರಾವಾಹಿಯಲ್ಲಿ ಕಾಕತಾಳೀಯ ಘಟನೆಗಳ ಸರಮಾಲೆಯೇ ಪ್ರಾರಂಭವಾಗಿದೆಯಲ್ಲಾ! ಜಾನಕಿ ಮನೆಬಿಟ್ಟು ಬರುವಾಗ ಒಂದೇ ವಾಹನದಲ್ಲಿ ಅತ್ತೆ ನಾದಿನಿಯರ ಭೇಟಿ, ನಂತರ ಶಂಕರ ದೇವಘಟ್ಟರ ಗೈರುಹಾಜರಿಯಲ್ಲಿ ಮಾವನ (ರಾಜು) ಸೇವೆಯ ಭಾಗ್ಯ, ಮುಂದೆ ಸಂಜನಾಳ ಪರಿಚಯದೊಂದಿಗೆ ಅತ್ತೆಮನೆಯ ಔತಣದೂಟದ ಸವಿ. ಇಷ್ಟೂ ಸಾಲದು ಅಂತ ಈಗ ನಿರಂಜನನ ಮನೆಯ ಒಂದು ಕೊಠಡಿಯನ್ನು ಜಾನಕಿಗೇ ಕೊಟ್ಟಿರುವುದು.

ಧಾರಾವಾಹಿ ವೀಕ್ಷಕರ ಕುತೂಹಲವನ್ನು ಹಿಡಿದು ಇಟ್ಟಿರುವುದರಲ್ಲಿ ಸಂದೇಹವಿಲ್ಲ. ಟಿ ಎನ್ ಸೀತಾರಾಂ ಇದರಲ್ಲಿ ನಿಪುಣರು! ಆದರೆ ಈಗೀಗ ಕಥೆ ಹೇಗೆ ಮುಂದುವರಿಯುತ್ತದೆ ಎಂದು ಊಹಿಸಬಹುದು. ಏಕೆಂದರೆ ಸಿಎಸ್‌ಪಿ, ಜಾನಕಿ ಮತ್ತು ಭಾರ್ಗಿ ಮೂವರನ್ನು ಬಿಟ್ಟರೆ ಎಲ್ಲರೂ ಪೆದ್ದರು. ಆದರೂ ಈ ಸೀರಿಯಲ್ ಬಹಳ ಚೆನ್ನಾಗಿದೆ ಎಂದು ಹೇಳಬಹುದು.

— ಮೀರಾ ಮೋಹನ್, ಕ್ಯಾಲಿಫೋರ್ನಿಯ,
ಸೀತಾರಾಮ್ ಹೆಗ್ಗಡೆ, ಬೆಳ್ತಂಗಡಿ

ವಾರದ ಪತ್ರ

## 'ಬಿಗ್ ಬಾಸ್' ಅಸಲಿಯತ್ತು!

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಬಿಗ್ ಬಾಸ್' ಕಾರ್ಯಕ್ರಮದಲ್ಲಿರುವ ಯುವ ಸಮೂಹದಿಂದ ಸಮಾಜ ಒಂದು ಗುರುತರವಾದ ಸಂದೇಶ ನಿರೀಕ್ಷಿಸುವುದು ಸಹಜ. ಆದರೆ, ವಾರದ ದಿನಗಳಲ್ಲಿ 'ಬಿಗ್ ಬಾಸ್' ಮನೆಯಲ್ಲಿರುವ ಸ್ಪರ್ಧಿಗಳ ನಡವಳಿಕೆ, ಅವರು ಬಳಸುವ ಭಾಷೆ, ಅವರ ಬಾಡಿ ಲಾಂಗ್ವೇಜ್ ಇತ್ಯಾದಿ ಒಂದು ರೀತಿ. ಶನಿವಾರ ಹಾಗೂ ಭಾನುವಾರ, ಅಂದರೆ ವಾರದ ರಜಾ ದಿನಗಳಲ್ಲಿ, ನಟ 'ಕಿಚ್ಚ ಸುದೀಪ್' ನಡೆಸಿಕೊಡುವ ಕೇವಲ ಎರಡುಮೂರು ತಾಸಿನ ಕಾರ್ಯಕ್ರಮದಲ್ಲಿ ಸ್ಪರ್ಧಿಗಳು ಸಂಪೂರ್ಣ ಬದಲಾಗಿ, ಅತ್ಯಂತ ವಿನಯದಿಂದ, ವಿನಮ್ರತೆಯಿಂದ ವರ್ತಿಸುವುದನ್ನು ಗಮನಿಸಿದರೆ 'ಬಿಗ್ ಬಾಸ್' ಕಾರ್ಯಕ್ರಮ ಮನರಂಜನೆಯೂ ಅಲ್ಲ, ನೈತಿಕತೆಯ ಪಾಠವೂ ಅಲ್ಲ ಎಂಬಂತಿದೆ. ಸ್ಪರ್ಧಿಗಳ ನಡುವಿನ ಕಿತ್ತಾಟ, ಗುದ್ದಾಟ, ಪರಸ್ಪರ ನಿಂದನೆ ಅಸಹ್ಯವೆನಿಸುತ್ತದೆ. ಕಾರ್ಯಕ್ರಮದ ಆಯೋಜಕರು ಈ ಅನಾಗರಿಕ ವರ್ತನೆಯನ್ನು ಗಮನಿಸಲಿ. 'ಬಿಗ್ ಬಾಸ್' ಕಾರ್ಯಕ್ರಮ ವೀಕ್ಷಕರ ಪಾಲಿಗೆ ಮುಜುಗರದ ವಾತಾವರಣ ಸೃಷ್ಟಿಮಾಡುವ ಪ್ರಯತ್ನವಾಗಬಾರದು.

— ಸುಶೀಲ ಬಿ.ಆರ್. ರಾಮಣ್ಣ, ಬೆಂಗಳೂರು

## ಅಸಹಜ ನಡವಳಿಕೆ

'ಮಗಳು ಜಾನಕಿ'ಯಲ್ಲಿ ಜಾನಕಿಯ ಎದುರಿನಲ್ಲಿ ಮಾತ್ರ ನಿರಂಜನ್ ಧಾವಳಿಯ ಪೋಷಕರು, ಸಿ.ಎಸ್.ಪಿ.ಯವರು ಪ್ರಜ್ಞಾಪೂರ್ವಕವಾಗಿ ಅಣ್ಣತಮ್ಮಂದಿರ ಹೆಸರನ್ನು ಕಿರಿದುಗೊಳಿಸಿ ರಂಜಿ ಪಬ್ಬಿ... ಇತ್ಯಾದಿ ಬೇರೆ ಬೇರೆ ಹೆಸರುಗಳಲ್ಲಿ ಹೇಳುತ್ತಾರೆ. ಆದರೆ ಇದು ತೀರ ಅಸಹಜತೆಯಿಂದ ಕೂಡಿದೆಯಲ್ಲವೆ! ಜಾನಕಿಗೆ ಕುತೂಹಲವಿಲ್ಲದಿರುವುದು ಅಷ್ಟೇ ಸೋಜಿಗ.

— ಅನಂತ ಪದ್ಮನಾಭ ಎಚ್.ಎಂ., ಮೈಸೂರು

## ಕೀಲು ನೋವಿರುವವರಿಗೆ ಆಶಾಕಿರಣ

ದೂರದರ್ಶನ ಚಂದನದ 'ಶುಭೋದಯ ಕರ್ನಾಟಕ'ದಲ್ಲಿ ಇತ್ತೀಚೆಗೆ ಪ್ರಸಾರವಾದ ಕಾರ್ಯಕ್ರಮ ಕೀಲು ಸಂಬಂಧಿ ನೋವಿಂದ ನರಳುತ್ತಿದ್ದವರಿಗೆ ನಿಜವಾದ ಶುಭೋದಯ. ಕೀಲುಗಳ ತೊಂದರೆಯಿದ್ದವರು ಎಲ್ಲರಂತೆ ನಡೆಯಬಹುದು ಎಂಬ ಭರವಸೆಯನ್ನು ನೀಡಿದ್ದಾರೆ ಭಾರತದ ಅದರಲ್ಲೂ ಕರ್ನಾಟಕದ ಹೆಮ್ಮೆಯ ವೈದ್ಯ ಡಾ. ಜಾನ್ ಎಬಿನೆಜರ್. ಡಾ. ರಾಜಕುಮಾರ್ ಅವರನ್ನೆ ಹಾಸಿಗೆಯಿಂದ ಎಬ್ಬಿಸಿ ಓಡಾಡಿಸಿದ ಡಾಕ್ಟರ್. ಹಲವಾರು ಗಿನ್ನೆಸ್ ದಾಖಲೆಗಳು. ದಾಖಲೆ ಮಾಡಬೇಕೆಂದು ಮಾಡಿದ್ದಲ್ಲ, ಎಲ್ಲವೂ ಸಹಜವಾಗಿ ಆಗಿರುವುದು. ಒಂದು ವರ್ಷದಲ್ಲಿ ವೈದ್ಯಕೀಯ ಅದರಲ್ಲೂ ಮೂಳೆ ಲೋಕದ ಬಗ್ಗೆ 103 ಪುಸ್ತಕಗಳನ್ನು ಬರೆದು ಗಿನ್ನೆಸ್ ದಾಖಲೆ ಮಾಡಿರುವ ನಮ್ಮೆಲ್ಲರ ಹೆಮ್ಮೆಯ ವ್ಯಕ್ತಿ ಡಾಕ್ಟರ್ ಜಾನ್. ಅವರು ಬರೆದಿರುವ ಪುಸ್ತಕಗಳನ್ನು ಯಾರಾದರೂ ದಯವಿಟ್ಟು ಕನ್ನಡಕ್ಕೆ ಅನುವಾದಿಸಿ.

— ಮಲ್ಲಿಕಾರ್ಜುನ ಎಂ., ಬೆಂಗಳೂರು

## ನೀತಿ ಕತೆ

ಹಿಂದಿನ ಕಾಲದಲ್ಲಿ ಅಜ್ಜಿಯರು ಮೊಮ್ಮಕ್ಕಳನ್ನು ತೊಡೆಯ ಮೇಲೆ ಕೂರಿಸಿಕೊಂಡು ರಾಮಾಯಣ, ಮಹಾಭಾರತ, ಜನಪದ ಕತೆ, ರಾಜ ಮಹಾರಾಜರ ಶೌರ್ಯ– ಪರಾಕ್ರಮದ ಕತೆ, ನೀತಿ ಕತೆಗಳನ್ನು ಹೇಳುತ್ತಿದ್ದರು. ಆದರೆ, ಈಗಿನ ಮಕ್ಕಳಿಗೆ ಅದು ಮರೀಚಿಕೆಯಾಗಿದೆ. ಚಂದನ ವಾಹಿನಿಯಲ್ಲಿ ನಾ.ಸೋಮೇಶ್ವರ ಅವರು ಪ್ರತಿ ದಿನ ರಾತ್ರಿ 9.30ಕ್ಕೆ 'ಥಟ್ ಅಂತ ಹೇಳಿ' ಕಾರ್ಯಕ್ರಮದಲ್ಲಿ ನೀತಿಯುತ ಕತೆಯನ್ನು ಅತ್ಯಂತ ಸೊಗಸಾಗಿ ಹೇಳುತ್ತಾರೆ. ಮಕ್ಕಳಲ್ಲದೇ, ದೊಡ್ಡವರೂ ಕೂಡ ಇದನ್ನು ಕೇಳಬಹುದು.

—ಟಿ.ಎಂ.ಮಾನಪ್ಪ, ಶಿವಮೊಗ್ಗ

## ಎರಡೂ ಸರಿಯಲ್ಲವೇ?

ಇತ್ತೀಚೆಗೆ ಪ್ರಸಾರವಾದ 'ಥಟ್ಟಂತ ಹೇಳಿ' ಕಾರ್ಯಕ್ರಮದಲ್ಲಿ ಪದಬಂಧದ ಮೇಲಿಂದ ಕೆಳಗೆ ಬರುವ ಪದದ ಮಧ್ಯದ ಅಕ್ಷರ 'ಣ' ಇತ್ತು ಹಾಗೂ ಸುಳಿವು 'ಧಾನ್ಯಗಳನ್ನು ಸಂಗ್ರಹಿಸುವ ಸ್ಥಳ' ಎಂದಿತ್ತು. ಭೀಮಸೇನ್ ಎಂಬುವವರು ಕಣಜ ಎಂದಾಗ ಅದನ್ನು ತಪ್ಪೆಂದು ಹೇಳುತ್ತಾ ಪಣತ ಸರಿ ಉತ್ತರ ಎಂದರು. ಅದರ ಜೊತೆ ಕಣಜವೂ ಸರಿಯಾದ ಶಬ್ದ ಆಗಿರುವುದರಿಂದ ನ್ಯಾಯವಾಗಿ ಅವರಿಗೆ ಪುಸ್ತಕ ಕೊಡಬೇಕಾಗಿತ್ತು .ಆದರೆ ಕೊಡಲಿಲ್ಲ.

ಇನ್ನು ಲೆಕ್ಕದ ಪ್ರಶ್ನೆಯಲ್ಲಿ ಒಂದು ನಿಮಿಷದ ಅವಧಿಯನ್ನು ನೀಡುವುದೇ ಇಲ್ಲ. ಬೇಗ ಯಾರಾದರೂ ಬಜರ್ ಒತ್ತಿದರೆ ಇನ್ನಿಬ್ಬರು ಅವಕಾಶ ವಂಚಿತರಾಗುತ್ತಾರಲ್ಲವೇ? ಆದ್ದರಿಂದ ಒಂದು ನಿಮಿಷ ಆಗುವವರೆಗೂ ಕಾದು ನಂತರ ಬಜರ್ ಪ್ರಕಾರ ಅವಕಾಶ ನೀಡಬೇಕಲ್ಲವೇ? ಈ ಬಗ್ಗೆ ಸಂಬಂಧಿಸಿದವರು ಗಮನ ಹರಿಸಲಿ.

— ಮಂಜುಳಾ ಸುಂದರ್ ರಾಜ್, ಬೆಂಗಳೂರು